ಕಥೆ

# ಮೂಕನಾಗಬೇಕು ಈ ಜಗದೊಳು ಜ್ವಾಕ್ಯಾಗಿರಬೇಕು

## (ಕಡಕೋಳ ಮಡಿವಾಳಪ್ಪನ ತತ್ವಪದ ನೆನೆದು...)

■ ಕಾ.ತ. ಚಿಕ್ಕಣ್ಣ



ಕೊಕ್ಕರೆಯಂತೆ ಕತ್ತನ್ನು ಎತ್ತಿ ತಳಾರಕ್ಕೆ ಪಕ್ಕಕ್ಕೆ ತಿರುಗಿ ಗೋಳಾಕಾರದ ಗಡಿಯಾರದ ಮೇಲೆ ನಿರ್ಮೋಹದಿಂದ ಕಣ್ಣು ಹಾಯಿಸಿದರು. ಮಧ್ಯಾಹ್ನ ಹನ್ನೆರಡು ಗಂಟೆ. ಅಂಕಿಗಳು ಸೊನ್ನೆಯಿಂದ ಪ್ರಾರಂಭವೆನ್ನುತ್ತಾರೆ. ಆದರೆ ಈ ಗೋಳಾಕಾರದ ಗಡಿಯಾರದಲ್ಲಿ ಸೊನ್ನೆಗೆ ಸ್ಥಳವೇ ಇಲ್ಲ. ಕೇವಲ ಹನ್ನೆರಡರವರೆಗಿನ ಅಂಕಿಗಳು ಮಾತ್ರ! ಬಹುಶಃ ಗೋಳಾಕಾರದ ಈ ಗಡಿಯಾರವೇ ಸೊನ್ನೆಯಾಗಿ ಅಂಕಿಗಳನ್ನೆಲ್ಲ ತನ್ನೊಳಗಿರಿಸಿ ಕೊಂಡಿರಬಹುದು. ಸೊನ್ನೆ ಮೊದಲೊ ಗೋಳ ಮೊದಲೊ...

ವೀರಭದ್ರೇಗೌಡರು ನಕ್ಕರು. ಕಾರಣ ಯಾಕೆಂದು ಅವರಿಗೇ ಹೊಳೆಯಲಿಲ್ಲ. ಹನ್ನೆರಡರ ಅಂಕಿ ಮೇಲೆ ಒಂದರಮೇಲೊಂದಿದ್ದ ಗಂಟೆ, ನಿಮಿಷ, ಸೆಕೆಂಡು ಮುಳ್ಳುಗಳು ಈಗ ಕ್ಕೊಕ್ಕೋ ಆಟದ ಮಕ್ಕಳು ಮತ್ತೆ ಮತ್ತೆ ಗೂಟ ಬಳಬಳಸಿ ಸುತ್ತುವಂತೆ, ಸುತ್ತುವಾಟದಲ್ಲಿ ಚದುರಿಹೋಗಿದ್ದವು. ಆ ಸೆಕೆಂಡಿನ ಮುಳ್ಳಂತೂ ಪ್ರೇಯಸಿಯನ್ನು ಬೈಕ್‌ಮೇಲೆ ಕೂರಿಸಿಕೊಂಡು ಓಡಿಸುವ ತರುಣನಂತೆ!

ಇತ್ತೀಚೆಗಂತೂ ಈ ಗಂಟೆಮುಳ್ಳೇ ಸೆಕೆಂಡು ಮುಳ್ಳಾಗಿಬಿಟ್ಟಿದೆಯೆನಿಸುತ್ತಿದೆ. ಯಾವಾಗ ಗಂಟೆ ನಿಮಿಷವಾಗಿ, ನಿಮಿಷ ಸೆಕೆಂಡಾಗಿ ಪರಿವರ್ತಿತವಾಯಿತು?

ಪಾರ್ವತಿ 'ಯಾಕಂಗೆ ಜೂಗರಿಸುತ್ತಾ ಕೂತಿದ್ದೀರಿ? ನಿದ್ದೆ ಬಂದ್ರೆ ರೂಮಿಗೋಗಿ ಮಲಗಿ' ಅಂದಳು. ಇವರು ಮಾತಾಡಲಿಲ್ಲ. ಅವಳೇ 'ಆ ಫ್ಯಾಮಿಲಿ ಮಾರ್ಟ್‌ಗೆ ಹೋಗಿದ್ದೆ. ಕೊತ್ತಂಬರಿ ಕರಿಬೇವು ನಿನ್ನೆ ತಂದೋವು ಕೊಳ್ತಂತಾಗಿದ್ದವಲ್ಲ, ಅದಕ್ಕೆ ಬೇರೆ ತಂದೆ. ನೋಡಿ ಈ ಮೂರು ಕಡ್ಡಿ ಕರಿಬೇವಿಗೆ ಹದಿನೈದು, ಕೊತ್ತಂಬರಿಯ ಈ ಚಿಕ್ಕ ಕಟ್ಟಿಗೆ ಇಪ್ಪತ್ತೈದು. ಹಿಂಗಾದ್ರೆ ಹೆಂಗೆ?' ದೂರಿದಳು. ಪರಿಹಾರ ತನ್ನ ಕೈಲಿ ಇರಲಿಲ್ಲವಾದ್ದರಿಂದ ಮತ್ತು ಹಣ ಕೊಡುವವ ತಾನೇ ಆದ್ದರಿಂದ ಸುಮ್ಮನೆ ಮುಖ ಮುಖ ನೋಡಿದರು. ಪಾರ್ವತಿ ಸೊಪ್ಪನ್ನು ಹೊರಗಿಟ್ಟು, ಸೋಪು ಹಾಕಿ ಬೇಸನ್‌ನಲ್ಲಿ ಕೈತೊಳೆಯತೊಡಗಿದಳು. ಆಗಾಗ ಸ್ಯಾನಿಟೈಸ್ ಮಾಡಬೇಕೆಂಬುದು ಒಂದು ಪ್ರೋಗ್ರಾಂ ಆಗಿದೆಯಲ್ಲ.

ಇಲ್ಲಿ ಕ್ರಿಯೆ–ಪ್ರತಿಕ್ರಿಯೆ, ನಗು–ಅಳು, ಕಷ್ಟ–ನಷ್ಟ, ಮತ್ತು ಈ ಕಾಲ ಎಲ್ಲವೂ ವೇಗದ ಕುದುರೆಯೇರಿ ಹೋಗುತ್ತಿವೆ...

ಅವರು ಅರ್ಧಕ್ಕೆ ಓದು ನಿಲ್ಲಿಸಿ ಬೋರಲು ಇಟ್ಟಿದ್ದ ತತ್ವಪದ ಪುಸ್ತಕವನ್ನು ಸರಿಯಿಟ್ಟರು. ಯಾಕೋ ಹಿಡಿದ ಪಟ್ಟಿನಲ್ಲೇ ಓದಿ ಮುಗಿಸಲೂ ಆಗುತ್ತಿಲ್ಲ...

ಮೊನ್ನೆ ಸಿಕ್ಕಿದ್ದ ಕವಿಮಿತ್ರ 'ಬದುಕನ್ನು ಮುಂದೋಡಲು ಬಿಡದೆ ಸಾವಧಾನದಲ್ಲಿ ಅನುಭವಿಸಬೇಕೆನ್ನುವವನು ನಾನು. ಆದ್ರೆ ಇದು ಹೇಗೆ ನುಸುಳಿ ಹೋಗ್ತಿದೆ ಗೊತ್ತಾ?' ಅಂದಿದ್ದ. ಇವರು 'ಹಂಗೆ ಸರಿದು ಹೋಗೋವಾಗ ಮುದಿಸುಕ್ಕುಗಳ ಮುದ್ರೆಯನ್ನೂ ಒತ್ತಿಕೊಂಡೇ ಹೋಗುತ್ತೆ ಅನ್ನೋದು ನೆನಪಿರಬೇಕು ನೋಡು ಶಿವಲಿಂಗಸ್ವಾಮಿ' ಅಂತ ಛೇಡಿಸಿದ್ದರು. ಇವರ ಲಘು ಮಾತು ಎಪ್ಪತ್ತರ ಹರೆಯದ ಕವಿಗೆ ಕಟು ಅನಿಸಿರಬೇಕು. ಅಪ್ರಿಯತೆಯನ್ನು ತೋರಿಸಿಕೊಳ್ಳದಿರಲು ಬಲವಂತದ ನಗು ತಂದುಕೊಂಡರು.

ವೀರಭದ್ರೇಗೌಡರು ಸೋಫಾದ ಮೇಲೆ ಕೂತಿದ್ದ ಭಂಗಿಯ ಬದಲಿಸಿಕೊಂಡರು. ಗೋಡೆ ಗಡಿಯಾರ ಈಗ ಮುಖ ನೇರವಾಯಿತು. ಓಡುವ ಸೆಕೆಂಡಿನ ಮುಳ್ಳಿನ ಸಂಗಡ ದೇಹ ಓಡಲಾಗದಿದ್ದರೂ ಮನಸ್ಸು ಮಾತ್ರ ಕವಿಮಿತ್ರರ ಆಸೆಯಂತೆ ತಾರುಣ್ಯದ ನವನವೀನತೆಯನ್ನು ತೋರುತ್ತದೆ.

ಕಣ್ಣುಗಳು ಸಣ್ಣಗೆ ಮಂಕು ಎಳೆಯುತ್ತಿದ್ದವು. ಹೆಂಡತಿಯ ಮಾತನ್ನು ಪಾಲಿಸುವುದೊಳಿತು ಎಂಬಂತೆ ಎದ್ದು ರೂಮಿಗೆ ಬಂದರು. ಕಿಟಕಿ ಬಳಿ ನಿಂತು ಹೊರ ನೋಡುವುದೊಂದು ರೂಢಿಯಿದೆಯಲ್ಲ. ಈ ಸಲ ಹೂವಿನಗಾಡಿಯ ಹುಡುಗ, ತಳ್ಳೋಗಾಡಿಯನ್ನು ಮರದ ನೆರಳಿಗೆ ನಿಲ್ಲಿಸಿ ತಾನು ಫುಟ್‌ಪಾತ್ ಮೇಲೆ ಚಕ್ಕಲಪಕ್ಕಲ ಕೂತಿದ್ದ. ತೆರೆದ ಗಾಡಿ ಮೇಲೆ ಕೆಂಪು, ಹಳದಿ, ಬಿಳಿ ಬಣ್ಣಗಳ ಹೂಗುಡ್ಡೆಗಳು ಹಾಗೇ ಇದ್ದವು. ಹುಡುಗನ ಕಣ್ಣುಗಳು ತನ್ನಂತೆ ಜೂಗರಿಸುತ್ತಿರಲಿಲ್ಲ. ಮುಂಜಾನೆಯಿಂದ ಕಾದು ಕುಂತವನಿಗೆ ಇನ್ನೂ ವ್ಯಾಪಾರ ಕುದುರಿದಂತೆ ಕಾಣುತ್ತಿರಲಿಲ್ಲ. ಅವನು ಸೇವಂತಿಗೆ, ಗುಲಾಬಿ, ಮಲ್ಲಿಗೆ ಹೂವುಗಳನ್ನು ಸ್ಪರ್ಶಿಸುವುದು, ಜರುಕಿರುವ ಹೂವುಗಳನ್ನು ಸರಿಜೋಡಿಸುವುದು, ಬಾಡದಿರುವಂತೆ ತೆಳುವಾಗಿ ನೀರು ಚಿಮುಕಿಸುವುದು ಮಾಡುತ್ತಿದ್ದ. ಮೊನ್ನೆಯ ಗೌರಿ–ಗಣೇಶ ಹಬ್ಬದ ಹಿಂದಿನ ದಿನ ತೆರೆದಗಾಡಿ ತುಂಬವಿದ್ದ ಹೂವೆಲ್ಲ ಸಂಜೆಹೊತ್ತಿಗೆ ಪೂರ್ಣ ಖಾಲಿಯಾಗಿದ್ದವು. ಬಿಕರಿದಿನದ ಭರವಸೆಯೇ ಉಳಿದ 29 ದಿನಗಳಿಗೂ ವಿಸ್ತರಣೆಗೊಂಡು ಕಾಯುವಂತೆ ಮಾಡಿತ್ತು. ಆ ನಿರೀಕ್ಷೆ ಇಲ್ಲದಿದ್ದರೆ ಮುಂಜಾನೆಯಿಂದ ಸಂಜೆವರೆಗಿನ ಅವನ ಕಾಯುವಿಕೆ ಬತ್ತಿಹೋಗಿ ಬಿಡುತ್ತದಲ್ಲ. ಈ ಹಬ್ಬ ಹರಿದಿನಗಳು ಹಾಗೆ ಸಂಭವಿಸುತ್ತಿರಬೇಕು. ಭರ್ರನೆ ಓಡಾಡುವ ವಾಹನಗಳು ಗತಿ ಬದಲಿಸಿ ನಿಲ್ಲಬೇಕು. ರಸ್ತೆ ಸಂಚಾರಿಗಳ ಕೈಯಲ್ಲಿ ಬುಟ್ಟಿ